ಕೆ.ಯಂ. ವೀರೇಶ್, ಕೂಡ್ಲಿಗಿ

*ರಾವಣರಿಗೆ ರಾಜ್ಯಭಾರ ಕೊಟ್ಟು ರಾಮರಾಜ್ಯದ ಕನಸು ಕಾಣುವ ನಮ್ಮನ್ನು ಏನೆನ್ನಬೇಕು?*



ರಾವಣನಿಗೆ ಕೊಟ್ಟರೆ ಇಂದಲ್ಲ ನಾಳೆ ರಾಮ ಬಂದಾನು; ಬಕಾಸುರರಿಗೆ ನೀಡಿರುವುದರಿಂದಲೇ ಎಡವಟ್ಟು.

ಕುಮಾರ್, ಮಲ್ಲೇಶ್ವರ

*ಸತ್ತ ಮೇಲೆ ನೀರುತುಂಬಿದ ಮಡಿಕೆಯೊಂದಿಗೆ ಮೂರು ಸುತ್ತು; ಒಂದೊಂದು ಸುತ್ತಿಗೂ ಒಂದೊಂದು ತೂತು; ಇದರ ಅರ್ಥವೇನು?*

ಸ್ವರ್ಗ, ಮರ್ತ್ಯ, ಪಾತಾಳ ಮೂರು ಲೋಕದಿಂದಲೂ ಆತ್ಮ ನೀರಿನಂತೆ ಹರಿದುಹೋಗಿ ಮೋಕ್ಷ ಪಡೆಯಲೆಂಬ ಸೂಚನೆ.

ಪಿ. ಗೋವಿಂದರಾಜ್, ಶಿವಮೊಗ್ಗ

*ಹಾನಿಕಾರಕ ವಸ್ತುಗಳ ಮೇಲೆ ಇರುವ ಪ್ರೀತಿ ಹೆತ್ತವರ ಮೇಲೆ ಇಲ್ಲ. ಏಕೆ?*

ಸಹಜವೇ. ಪಟಾಕಿ ಕೊಡುವ ಥ್ರಿಲ್ಲನ್ನು ಹಣತೆ ಕೊಡುವುದಿಲ್ಲ.

ಎಚ್.ಆರ್. ದೇಸಾಯಿ, ರಾಯಚೂರು

*ನನ್ನ ಜಾತಿ ನನಗೇ ಗೊತ್ತಿಲ್ಲ. ಆದರೆ ರಾಜಕಾರಣಿಗೆ ಹೇಗೆ ಗೊತ್ತಾಯಿತು?*




ನೊಣಕ್ಕೆ ಜಿಪಿಎಸ್ ಇಲ್ಲದೆಯೇ ತಿಪ್ಪೆಯ ಅಡ್ರೆಸ್ ತಿಳಿಯುತ್ತದೆ.

ರಮೇಶ. ಜ. ಬೊಂಗಾಳೆ, ಬೆಳಗಾವಿ

*ದೇವರು ವರ ಕೊಟ್ಟರೂ ಪೂಜಾರಿ ವರ ಕೊಡುವುದಿಲ್ಲವಂತೆ. ಏಕೆ?*

ದೇವ ಕೊಡುವುದು ಕ್ರಯಪತ್ರ; ಪೂಜಾರಿ ಕೊಡುವುದು ಖಾತಾ. ಸ್ವತ್ತು ಒಂದೇ ಆದರೂ ಇಲಾಖೆಗಳೇ ಬೇರೆ, ಅರ್ಜಿಗಳೇ ಬೇರೆ.

ಮಂಜುನಾಥ ಎಸ್, ಗುಂಜೂರು

*ಇಬ್ಬರು ಪೈಪೋಟಿಯಿಂದ ಎದುರುಬದುರು ಹನುಮಂತನ ದೇವಾಲಯ ನಿರ್ಮಿಸಿದ್ದಾರೆ. ಯಾವುದಕ್ಕೆ ಹೋಗಲಿ?*

ಒಳಹೋಗಿ ನೈವೇದ್ಯವಿತ್ತರೆ ಮಾತ್ರ ವರ ನೀಡಲು ಹನುಮ ಸರ್ಕಾರಿ ಅಧಿಕಾರಿಯೆ? ಆಚೆಯಿಂದಲೇ ಕೈಮುಗಿದು ಸಾಗಿ.

ಶಂಕರೇಗೌಡ, ಮಂಡ್ಯ

*ನಾಯಿಕೊಡೆಗಳಂತೆ ಜ್ಯೋತಿಷಿಗಳು ಹುಟ್ಟಿಕೊಂಡಿರುವಂತೆ ಜ್ಯೋತಿಷಿನಿಯರು ಹುಟ್ಟಿಕೊಂಡಿಲ್ಲವಲ್ಲಾ...?*

ಕೈ ನೋಡಲೆಂದು ಕೈ ಹಿಡಿದರೆ ಹಿಡಿಸಿಕೊಂಡವರೇ ಹಿಡಿದವರ ಕೈ ಹಿಡಿದುಬಿಡುವ ಭಯವಂತೆ.

ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

*ಹಣ ತೆತ್ತು ವಿಶೇಷ ಸಾಲಿನಲ್ಲಿ ಹೋಗಿ ಪಡೆದ ದೇವರ ದರ್ಶನ ಫಲಪ್ರದವಾಗುತ್ತದಾ ರಾಂ?*

ನಿಮ್ಮ ಹಣದಿಂದ ಕನಿಷ್ಠ ಇಬ್ಬರು ಭಕ್ತರ ಊಟದ ಖರ್ಚು ಏಳುತ್ತದಲ್ಲ, ಅನ್ನದಾನದ ಫಲ ಲಭ್ಯವಾಗುತ್ತದೆ.

ಕುಬೇರಪ್ಪ ವಿಭೂತಿ, ಹರಿಹರ

*ಜಾತ್ಯತೀತ ಮದುವೆಗಳು ಹೆಚ್ಚಾಗುತ್ತಿದ್ದರೂ ನಮ್ಮಲ್ಲಿನ ಮತಾಂಧತೆ ಹೋಗುತ್ತಿಲ್ಲವಲ್ಲ, ಏಕೆ?*

ಪ್ರತಿದಿನ ಸೂರ್ಯ ಬಂದರೂ ರಾತ್ರಿಗೆ ಕತ್ತಲೇ ಗಟ್ಟಿಯಲ್ಲವೇ... ಜ್ಞಾನದ ಬೆಳಕು ಬೀಳುವವರೆಗೆ ಮನದಾಗಸ ಕತ್ತಲೇ.

ಮೊಳಕಾಲ್ಮೂರು ಸುರೇಶ್, ಬಳ್ಳಾರಿ

*ಕುಡಿತ ಬಿಟ್ಟವರಿಗೆ ಸರಕಾರದಿಂದ ಬಹುಮಾನ ಕೊಡಿಸಿದರೆ ಹೇಗೆ?*

ಕೊಡಿಸಿದ್ದೆ. ಬಹುಮಾನ ಬಂದುದನ್ನು ಸೆಲಿಬ್ರೇಟ್ ಮಾಡಲು ಬಾರ್‌ಗೆ ಹೋದರು.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಸುಖ ಪಡಲು ಸಂಸಾರವೇ ಏಕೆ? ಬೇರೆ ದಾರಿಗಳಿಲ್ಲವೆ?*

ಕೊಂಚ ಯೋಚಿಸಿ... ಇದೇ ಪ್ರಶ್ನೆಯನ್ನು ನಿಮ್ಮ ಮಗಳು, ಹೆಂಡತಿಯೂ ಕೇಳಿದರೆ.....

ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ

*ಜೈಲುವಾಸ ಅನುಭವಿಸಲು ಪುಣ್ಯ ಮಾಡಿರಬೇಕೆ?*

ಖಂಡಿತ; ಪುಸ್ತಕ, ಟಿವಿ, ಮೊಬೈಲ್ ಇಲ್ಲದ ಬಿಗ್‌ಬಾಸ್ ಮನೆಗಿಂತ ಕಂಫರ್ಟ್ ಫಾರ್ ಕ್ಯಾಶ್ ಸಿಗುವ ಜೈಲೇ ವಾಸಿ!

## ಬಹುಮಾನಿತ ಪ್ರಶ್ನೆ

ಅರುಣ್ ಕುಲಕರ್ಣಿ, ನರೇಗಲ್ಲ

*ಮಹಾಪೌರರನ್ನು ಪೂಜ್ಯ ಮಹಾಪೌರರು ಎಂದು ಕರೆಯುವುದೇಕೆ?*

ದಿನವೂ ಒಬ್ಬರಲ್ಲ ಒಬ್ಬರಿಂದ ಸರಿಯಾಗಿ ಪೂಜೆ ಆಗುತ್ತಿರುವುದರಿಂದ.

ತುರಗಲ್ಲ ಉಮೇಶ, ರಾಮದುರ್ಗ

*ಈಗ ಬುದ್ಧ, ಬಸವ ಹುಟ್ಟಿಬಂದರೆ ನಮ್ಮ ದೇಶ ರಾಮರಾಜ್ಯ ಆಗಬಹುದೆ?*

ಹ್ಞ! ಭಗವಾನ್‌ರಂತಹ ಬುದ್ಧಿಜೀವಿಗಳು ಇರುವವರೆಗೆ ಸ್ವತಃ ರಾಮನೇ ಬಂದರೂ ರಾಮರಾಜ್ಯವಾಗದು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ಸತ್ಯಕ್ಕೂ, ಸುಳ್ಳಿಗೂ ಎಷ್ಟು ದೂರ?*

ಬೆಂಗಳೂರಿನಲ್ಲಂತೂ ನೂರು ಮೀಟರ್ ಅಷ್ಟೆ. ರಸ್ತೆಯ ಆ ಬದಿಗೆ ಕೋರ್ಟ್, ಈ ಬದಿಗೆ ವಿಧಾನಸೌಧ.

ಕುಮಾರ ಚಲವಾದಿ, ಹೊಳೆನರಸಿಪುರ

*ಕೃಷ್ಣನ ಕೈಯಲ್ಲಿ ಚಕ್ರವಿದ್ದಾಗ ಯಾರೂ ಅರೆಸ್ಟ್ ಮಾಡಲಿಲ್ಲ. ಈಗ ಎ.ಕೆ.47 ಹಿಡಿದವರನ್ನು ಜೈಲಿಗೆ ಅಟ್ಟುತ್ತಾರಲ್ಲ, ಏಕೆ?*



ಚಕ್ರ ಉಗ್ರರ ಬಾಂಬ್‌ನಂತಿರದೆ ಕೋರ್ಟಿನ ಪೀನಲ್ ಕೋಡ್‌ನಂತೆ ಇದ್ದುದರಿಂದ.

ಪಿ.ಎನ್. ಶ್ರೀವತ್ಸ, ಬೆಂಗಳೂರು

*ಮುಂಚೆ ಗಾಡಿಗಳಲ್ಲಿ ಬಂದು ಮಾರಾಟವಾಗುತ್ತಿದ್ದ ಉಪ್ಪು ಈಗ ಕಾಣದಾಗುತ್ತಿರಲು ಕಾರಣ?*

ಈಗ ಟೂತ್‌ಪೇಸ್ಟ್‌ನಲ್ಲೇ ಉಪ್ಪು, ನಿಂಬೆ ಎಲ್ಲ ದೊರಕುವುದರಿಂದ ಸೆಪರೇಟಾಗಿ ಮಾರುವ ಅಗತ್ಯವಿಲ್ಲವಂತೆ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

*ಹುಡುಗಿಯರು ಗಣಿತವಿದ್ದಂತೆ ಎಂದೇಕೆ ಹೇಳುವರು?*

ಎಸ್‌ಎಸ್‌ಎಲ್‌ಸಿ, ಪಿಯುಸಿ ಲೆವೆಲ್ಲಿ ಗಣಿತದಂತೆಯೇ ಏನೇನೂ ಅರ್ಥವಾಗದೆ ಹುಡುಗರು ಫೇಲ್ ಆಗಕ್ಕೆ ಕಾರಣವಾಗೋದ್ರಿಂದ.

■ ರಾಮ್